**ಮಾತು ಕಟ್ಟೆ**



ರಾಹುಲ್ ಗಾಂಧಿಯವರ ರೋಡ್ ಶೋ ಸಾಕಷ್ಟು ಪರಿಣಾಮ ಕಾರಿಯಾಗಿದ್ದು ಜನಸಾಮಾನ್ಯರಲ್ಲಿ ವಿಶೇಷ ಪ್ರಭಾವ ಬೀರಿದೆ. ಇಂದಿರಮ್ಮನ ಮೊಮ್ಮಗ ಎಂಬ ಕಾರಣಕ್ಕಾಗಿ ಹಿರಿಯರೆಲ್ಲ ರಾಹುಲ್‌ರನ್ನು ಹತ್ತಿರದಿಂದ ಕಾಣಲು ಕಾತರರಾಗಿದ್ದರು. ಯುವಜನತೆ ಇಂಥ ಮಹಾನ್ ನಾಯಕ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬೆರೆತಿದ್ದನ್ನು ಕಂಡು ವಿಸ್ಮಿತರಾಗಿದ್ದಾರೆ.
– **ಶಿವರಾಜ ತಂಗಡಗಿ,** ಕನಕಗಿರಿ ಶಾಸಕ

@vishwavaninews vishwavanitimely epaper.vishwavani.news vishwavani.news

## ಸಣ್ ಸುದ್ದಿ

### ಬಿಜೆಪಿ ತೊರೆಯುವ ಪ್ರಶ್ನೆಯೇ ಇಲ್ಲ



**ಬೆಳಗಾವಿ:** ಯಾವುದೇ ಕಾರಣಕ್ಕೂ ಬಿಜೆಪಿ ತೊರೆಯುವ ಪ್ರಶ್ನೆಯೇ ಇಲ್ಲ. ಕೆಲ ರಾಜಕೀಯ ವಿರೋಧಿಗಳು ಹುಕ್ಕೇರಿ ಶಾಸಕ ಉಮೇಶ ಕತ್ತಿ ಹಾಗೂ ನಾನು ಜೆಡಿಎಸ್ ಸೇರುತ್ತಾರೆ ಎಂಬ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ ಎಂದು ಅರಭಾವಿ ಬಿಜೆಪಿ ಶಾಸಕ ಬಾಲಚಂದ್ರ ಜಾರಕಿಹೊಳಿ ಸ್ಪಷ್ಟಪಡಿಸಿದರು.

ನಗರದಲ್ಲಿ ಭಾನುವಾರ ಪತ್ರಕರ್ತರ ಜತೆ ಮಾತನಾಡಿದ ಅವರು, ನಾನು ಜೆಡಿಎಸ್ ಸೇರುವುದಾಗಿ ಕೆಲವರು ಹರಡಿಸಿರುವ ಸುದ್ದಿ ಸುಳ್ಳು. ಚುನಾವಣೆ ಸಮೀಪಿಸುತ್ತಿದ್ದಂತೆ ಇಂಥ ಗಾಳಿ ಸುದ್ದಿ ಹರಡಿಸಲಾಗುತ್ತಿದೆ. ಕಾರ್ಯಕರ್ತರು ಇಂತಹ ವಿಷಯಗಳಿಗೆ ಕಿವಿಗೊಡದಂತೆ ಮನವಿ ಮಾಡಿಕೊಂಡ ಅವರು, ಈಗಾಗಲೇ ಒಂದು ಹಂತದಲ್ಲಿ ಚುನಾವಣಾ ಪ್ರಚಾರ ಮುಗಿಸಿದ್ದೇನೆ. ಕಳೆದ ಸಲ 25 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದ ನಾನು, ಈ ಸಲ ಅದಕ್ಕಿಂತ ಹೆಚ್ಚು ಮತಗಳಿಂದ ಜಯ ಗಳಿಸುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

### ಮಹಿಳೆಯರಿಗೆ ಕುಕ್ಕರ್ ವಿತರಣೆ!



ಉಚಿತ ಕುಕ್ಕರ್ ಪಡೆದು ಸಾಗುತ್ತಿರುವ ಮಹಿಳೆಯರು.

**ಚಿಕ್ಕನಾಯಕನಹಳ್ಳಿ:** ಹುಟ್ಟು ಹಬ್ಬದ ನೆಪವಾಗಿ ಶಾಸಕ ಸುರೇಶ್ ಬಾಬು ಸುಮಾರು 5 ಸಾವಿರ ಮಹಿಳೆಯರಿಗೆ ಕುಕ್ಕರ್ ವಿತರಿಸಿರುವುದು ಇದೀಗ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಯಾಗುತ್ತಿದೆ. ಫೆ. 16ರಂದು ಶಾಸಕರ ಹುಟ್ಟು ಹಬ್ಬವನ್ನು ಅವರ ಅಭಿಮಾನಿಗಳು ಅದ್ದೂರಿಯಾಗಿ ಆಚರಿಸುತ್ತಿದ್ದು, ಹುಟ್ಟು ಹಬ್ಬದ ಪ್ರಯುಕ್ತ ಮಹಿಳೆಯರಿಗೆ ಕುಕ್ಕರ್ ನೀಡಿದ್ದಾರೆ. ಚುನಾವಣೆ ಹತ್ತಿರ ಬರುತ್ತಿರುವಾಗ ಶಾಸಕರು ಮತದಾರರಿಗೆ ಆಮಿಷ ಒಡ್ಡುತ್ತಿರುವ ಬಗ್ಗೆ ವಿರೋಧ ವ್ಯಕ್ತವಾಗಿದೆ.

### ಬಹುಮತ ಬರುವುದು ಡೌಟ್: ಬಾಬಾಗೌಡ



**ಧಾರವಾಡ:** ಬರುವ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸಂಪೂರ್ಣ ಬಹುಮತ ಬರುವುದು ಸಂದೇಹ ಇದೆ ಎಂದು ಕೇಂದ್ರದ ಮಾಜಿ ಸಚಿವ ಹಾಗೂ ಜೆಡಿಎಸ್ ರೈತ ರಾಜ್ಯ ಘಟಕದ ಅಧ್ಯಕ್ಷ ಬಾಬಾಗೌಡ ಪಾಟೀಲ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಮೇಲೆ ಕುಮಾರಸ್ವಾಮಿ ಅವರು ಹೊಂದಿರುವ ಕಾಳಜಿ ಮನಗಂಡು ನಾನು ಅವರ ಮೇಲೆ ವಿಶ್ವಾಸವಿಟ್ಟು ಜೆಡಿಎಸ್ ಸೇರಿದ್ದೇನೆ. ಯಾವುದೇ ಆಮಿಷಗಳಿಗೆ ಒಳಗಾಗಿ ಜೆಡಿಎಸ್ ಸೇರಿಲ್ಲ. ಕಾಂಗ್ರೆಸ್ ಜೆಡಿಎಸ್‌ಗೆ ಪರ್ಯಾಯವಾಗಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಬೇಕಿದೆ. ಸಂಪೂರ್ಣ ಬಹುಮತ ಪಡೆಯಲು ಪ್ರಯತ್ನ ಪಡುತ್ತಿದ್ದೇವೆ. ಆದರೆ, ಸಂದೇಹವೂ ಇದೆ ಎಂದು ಅವರು ಹೇಳಿದರು. ನಾನು ಪಕ್ಷಾಂತರಿ ಎಂಬ ಟೀಕೆಯನ್ನು ನಮ್ರತೆಯಿಂದ ಸ್ವೀಕರಿಸುತ್ತೇನೆ. ರೈತರ ಸಮಸ್ಯೆ ಬಗೆಹರಿಸುವ ಹಪಾಹಪಿಯಿಂದ ಈ ನಿರ್ಧಾರ ತೆಗೆದುಕೊಳ್ಳಬೇಕಾಯಿತು. ಕುಮಾರಸ್ವಾಮಿ ಆ ಭರವಸೆ ನೀಡಿದ್ದರಿಂದ ಜೆಡಿಎಸ್ ಸೇರಿದ್ದೇನೆ. ನನ್ನ ಒಡನಾಟವಿರುವ 22 ಕ್ಷೇತ್ರಗಳಲ್ಲಿ ನನ್ನ ಆತ್ಮೀಯರಿದ್ದಾರೆ. ಈ ಪೈಕಿ 10 ಕ್ಷೇತ್ರದಲ್ಲಾದರೂ ಜೆಡಿಎಸ್ ಗೆಲ್ಲಬೇಕು ಎಂಬ ಆಸೆ ಇದೆ. ಹೀಗಾಗಿ ಪ್ರಚಾರ ಮಾಡುತ್ತೇನೆ ಎಂದರು.

### ಸ್ಲಂ ವಾಸಿಗಳಿಗೆ ಮೂಲ ಸೌಕರ್ಯ ಲಭಿಸಿಲ್ಲ

**ಚಿತ್ರದುರ್ಗ:** 60 ವರ್ಷ ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಕೊಳಗೇರಿ ಜನತೆಯನ್ನು ಮತ ಬ್ಯಾಂಕ್ ಗಳಾಗಿಯೇ ಬಳಕೆ ಮಾಡಿಕೊಂಡಿದ್ದಾರೆಯೇ ಹೊರತು ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿಲ್ಲ ಎಂದು ಶಾಸಕ ತಿಪ್ಪಾರೆಡ್ಡಿ ಆರೋಪಿಸಿದ್ದಾರೆ. ನಗರದ ಹೊಳಲ್ಕೆರೆ ರಸ್ತೆಯ ಸಂಪಿಗೆ ಸಿದ್ದೇಶ್ವರ ಶಾಲೆಯ ಹಿಂಭಾಗದ ಸ್ಲಂನಲ್ಲಿ ಸ್ಲಂ ದುರ್ಭಾಗ್ಯ' ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಾಂಗ್ರೆಸ್ ದುರಾಡಳಿತದಿಂದಾಗಿ ಸ್ಲಂ ವಾಸಿಗಳಿಗೆ ಇಂದಿಗೂ ಮೂಲ ಸೌಕರ್ಯಗಳು ಲಭಿಸಿಲ್ಲ ಎಂದು ದೂರಿದರು. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ 32,91,434 ಜನ ಸ್ಲಂ ನಿವಾಸಿಗಳು ಸೇರಿ ಒಟ್ಟು ನಗರಗಳ 100 ಜನರಲ್ಲಿ 14 ಜನರು ಸ್ಲಂಗಳಲ್ಲಿ ವಾಸ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

### ಜನರು ತಕ್ಕ ಪಾಠ ಕಲಿಸುತ್ತಾರೆ



**ಸೊರಬ:** ಜೆಡಿಎಸ್ ಶಾಸಕ ಮಧುಬಂಗಾರಪ್ಪ ಅಧಿಕಾರಿಗಳ ಮೂಲಕ ಸುಲಿಗೆ ಮಾಡುವುದಲ್ಲದೆ, ಶ್ರೀ ರಾಮಚಂದ್ರಪುರ ಮಠದ ಬಗ್ಗೆ ಮತ್ತು ಅನಂತ್ ಕುಮಾರ್ ಹೆಗಡೆ ಬಗ್ಗೆ ಕೀಳು ಮಟ್ಟದ ಮಾತುಗಳನ್ನು ಆಡುತ್ತಾರೆ. ಮಧು ಬಂಗಾರಪ್ಪನವರಿಗೆ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಇವರಿಗೆ ಕ್ಷೇತ್ರದ ಜನ ಈ ಬಾರಿಯ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸುತ್ತಾರೆ ಎಂದು ಬಿಜೆಪಿ ಮುಖಂಡ ಕುಮಾರ್ ಬಂಗಾರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ವಿಶೇಷ ಸ್ಥಾನಮಾನ ನೀಡಿದ್ದನ್ನು ಜನರಿಗೆ ಜ್ಞಾಪಿಸಿದ ರಾಹುಲ್ | ಗಣಿ ನಾಡಿನಿಂದ ಚುನಾವಣಾ ರಣಕಹಳೆ

# ಹೈ-ಕ ಮತ ಬುಟ್ಟಿಗೆ ಕೈ ಹಾಕಿದ ರಾಗಾ

**ವಿರುಪಾಕ್ಷ ಹಲಕರ್ಣಿಮಠ** ಹುಬ್ಬಳ್ಳಿ

ಹೈ-ಕ ಪ್ರದೇಶದಲ್ಲಿ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಬಿರುಗಾಳಿ ಪ್ರವಾಸ ಸಾಕಷ್ಟು ಪರಿಣಾಮ ಕಾರಿಯಾಗಿದ್ದು ಮುಂಬರುವ ವಿಧಾನ ಸಭಾ ಚುನಾವಣೆಯ ರಣಕಹಳೆಯನ್ನು ವಿಜಯನಗರ ಅರಸರ ರಾಜಧಾನಿಯಿಂದಲೇ ಮೊಳಗಿಸಿದ್ದಾರೆ.

ಮೋದಿ, ಶಾ ಪ್ರವಾಸದ ಬಳಿಕ ರಾಜ್ಯಕ್ಕೆ ಆಗಮಿಸಿರುವ ರಾಹುಲ್ ಗಾಂಧಿ ತಮ್ಮ ಮೂರು ದಿನಗಳ ಮೊದಲ ಭೇಟಿಯನ್ನು ಹೈದರಾಬಾದ ಕರ್ನಾಟಕ ಪ್ರದೇಶಕ್ಕೆ ಮೀಸಲಿಟ್ಟಿರುವುದು ವಿಶೇಷವಾಗಿದೆ. ಈ ಹಿಂದೆ ಮನಮೋಹನ ಸಿಂಗ್ ಪ್ರಧಾನಿಯಾಗಿದ್ದಾಗ ಹೈ-ಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ್ದನ್ನು ಜನರಿಗೆ ತಿಳಿಸಿ ಮತ ಸೆಳೆಯುವ ಅವರ ಪ್ರಯತ್ನ ಬಹುಮಟ್ಟಿಗೆ ಯಶಸ್ವಿಯಾಗಲೂ ಬಹುದು. ಇದೇ ಸಂದರ್ಭದಲ್ಲಿ ಅವರು ಎನ್‌ಡಿಎ ಅವಧಿಯಲ್ಲಿ ಗೃಹ ಸಚಿವರಾಗಿದ್ದ ಲಾಲಕೃಷ್ಣ ಆಡ್ವಾಣಿ ಹೈ-ಕ ಪ್ರದೇಶಕ್ಕೆ ವಿಶೇಷ ಸ್ಥಾನ ಮಾನ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದನ್ನು ಜ್ಞಾಪಿಸುತ್ತ ಬಿಜೆಪಿ ವಿರುದ್ಧ ಚಾಟಿ ಬೀಸುವ ಕೆಲಸವನ್ನೂ ಮಾಡುತ್ತಿದ್ದಾರೆ.

ಮೊದಲೆರಡು ದಿನಗಳಲ್ಲಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಮಿಂಚಿನ ಸಂಚಾರ ನಡೆಸಿರುವ ರಾಹುಲ್, ಬಹಿರಂಗ ಸಮಾವೇಶಗಳಿಗಿಂತ ರೋಡ್ ಶೋಗೆ ಆದ್ಯತೆ ನೀಡಿರುವುದು ಗಮನಾರ್ಹವಾಗಿದೆ.



ಕನಕಗಿರಿ ಕನಕಾಚಲ ದೇವಸ್ಥಾನಕ್ಕೆ ಭೇಟಿ ನೀಡಿದ ರಾಹುಲ್ ಗಾಂಧಿಯವರಿಗೆ ದೇವಸ್ಥಾನ ಅರ್ಚಕ ಇತಿಹಾಸ ವಿವರಿಸುತ್ತಿದ್ದಾರೆ. ಶಾಸಕ ಶಿವರಾಜ ತಂಗಡಗಿ ಜತೆಗಿದ್ದಾರೆ.

ಬಹುಶಃ ರೋಡ್ ಶೋ ಮೂಲಕ ಹೆಚ್ಚು ಜನರನ್ನು ತಲುಪುವ ಅವರ ಉದ್ದೇಶ ಫಲಕಾರಿಯಾಗಲೂ ಬಹುದು.

ರೋಡ್ ಶೋ ವೇಳೆ ಹೆಚ್ಚು ಜನಸಾಮಾನ್ಯರೊಂದಿಗೆ ಬೆರೆಯುತ್ತಿರುವ ರಾಹುಲ್ ಸಿದ್ದರಾಮಯ್ಯ ಸರಕಾರ ಜಾರಿಗೊಳಿಸಿರುವ ಜನಪರ ಯೋಜನೆಗಳ ಕುರಿತು ಪ್ರಸ್ತಾಪಿಸುತ್ತ, ಕೇಂದ್ರ ಸರಕಾರದ ವೈಫಲ್ಯಗಳ ಪಟ್ಟಿಯನ್ನು ಮುಂದಿಟ್ಟು ಮತ್ತೊಮ್ಮೆ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಅವಕಾಶ ನೀಡುವಂತೆ ಕೇಳಿಕೊಳ್ಳುತ್ತಿದ್ದಾರೆ.

ರಾಹುಲ್ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅವರ ಸಂಪುಟದ ಬಹುತೇಕ ಸಚಿವರ ದಂಡೇ ಇದ್ದು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಹೋದಲ್ಲೆಲ್ಲ ಆಯಾ ಭಾಗದ ಪ್ರಮುಖ ದೇವಾಲಯ, ಮಠಗಳಿಗೆ ಭೇಟಿ ನೀಡುವ ಕೆಲಸವನ್ನು ರಾಹುಲ್ ಮಾಡುತ್ತಿದ್ದಾರೆ. ಹುಲಿಗಿಯ ಹುಲಿಗೆಮ್ಮ ದೇವಸ್ಥಾನ, ಕೊಪ್ಪಳದ ಗವಿಮಠ, ಕನಕಗಿರಿಯ ಕನಕಾಚಲ ದೇವಾಲಯಗಳಿಗೆ ಭೇಟಿ ನೀಡಿ ದರ್ಶನಾಶೀರ್ವಾದ ಪಡೆದಿದ್ದಾರೆ. ಈ ಮೂಲಕ ಜನರನ್ನು ಸೆಳೆಯುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ.

ರಾಹುಲ್ ಸಂಚರಿಸಿರುವ ಎರಡೂ ಜಿಲ್ಲೆಗಳಲ್ಲಿ ಕಾಂಗ್ರೆಸ್ ಸ್ಥಿತಿಗತಿ ಅಷ್ಟೇನೂ ಉತ್ತಮವಾಗಿಲ್ಲ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಈಗಿರುವ ಸ್ಥಾನ ಉಳಿಸಿಕೊಳ್ಳುವ ಜತೆಗೆ ಹೆಚ್ಚುವರಿ ಸ್ಥಾನಗಳಿಸಲು ರಾಹುಲ್ ಮತ್ತವರ ತಂಡ ತಂತ್ರ ರೂಪಿಸುತ್ತಿದೆ. ಬಳ್ಳಾರಿಯಲ್ಲಿ ಕಳೆದ ಬಾರಿ ರೆಡ್ಡಿ ಸಹೋದರರಿಗೆ ಮಣ್ಣು ಮುಕ್ಕಿಸಿ ಹೆಚ್ಚಿನ ಸ್ಥಾನ ಗೆದ್ದಿದ್ದ ಕಾಂಗ್ರೆಸ್‌ಗೆ ಈ ಬಾರಿ ಆ ಸಾಧ್ಯತೆಗಳು ಕಡಿಮೆ. ರೆಡ್ಡಿ ಸಹೋದರರು ಮತ್ತು ಬಿ. ಶ್ರೀರಾಮುಲು ಕೈ ಬಲ ಮುರಿಯಲು ಈಗಾಗಲೇ ತಂತ್ರಗಾರಿಕೆ ರೂಪಿಸುತ್ತಿದ್ದಾರೆ.

ಹೀಗಾಗಿ ಬಳ್ಳಾರಿ ಯಲ್ಲಿ ಪಕ್ಷಕ್ಕೆ ಮತ್ತು ಕಾರ್ಯಕರ್ತರಿಗೆ ಟಾನಿಕ್ ನೀಡುವ ಅವಶ್ಯಕತೆಯಿತ್ತು. ಈ ಕೆಲಸವನ್ನು ರಾಹುಲ್ ಭೇಟಿ ಮೂಲಕ ಮಾಡಿದ್ದಾರೆ.

ಕೊಪ್ಪಳದಲ್ಲಿ ಮೂವರು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಈ ಬಾರಿ ಐದೂ ಕ್ಷೇತ್ರಗಳನ್ನು ಗೆಲ್ಲಲು ರಣತಂತ್ರ ರೂಪಿಸುತ್ತಿದೆ. ಇಲ್ಲಿ ಬಿಜೆಪಿ ಕೂಡ ಸಾಕಷ್ಟು ಬಲಶಾಲಿಯಾಗಿದ್ದು ಕಾಂಗ್ರೆಸ್ ಕೋಟೆ ಛಿದ್ರ ಮಾಡಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದೆ.

### ವಿವಾದ ಮೈಮೇಲೆಳೆದುಕೊಂಡ ರಾಹುಲ್

**ಯಲಬುರ್ಗದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಸಂದರ್ಭದಲ್ಲಿ ಶೂ ಧರಿಸಿದ್ದು ಜನರಲ್ಲಿ ಇರಿಸು ಮುರಿಸು ಉಂಟು ಮಾಡಿತು. ಅದೇ ರೀತಿ ಇತಿಹಾಸ ಪ್ರಸಿದ್ಧ ಕನಕಾಚಲ ದೇವಾಲಯಕ್ಕೆ ಭೇಟಿ ನೀಡುವ ಮುನ್ನ ಅವರು ಮಾಂಸಾಹಾರ ಸೇವಿಸಿದ್ದರು ಎಂಬ ಅಂಶ ಕೂಡ ಜನರಲ್ಲಿ ಸಾಕಷ್ಟು ಅಸಮಾಧಾನ ಹುಟ್ಟುಹಾಕಿದೆ. ಆದರೆ, ಹುಲಿಗೆಮ್ಮ ದೇವಾಲಯ, ಗವಿ ಮಠಗಳಿಗೆ ಭೇಟಿ ನೀಡಿದಾಗ ಇಂಥ ಯಾವುದೇ ವಿವಾದ ಕಂಡು ಬಂದಿರಲಿಲ್ಲ. ರಾಹುಲ್ ಪ್ರಚಾರಕ್ಕೆ ಅಡ್ಡಿಯುಂಟು ಮಾಡಲು ವಿರೋಧ ಪಕ್ಷಗಳವರು ಇಂಥ ವದಂತಿಗಳನ್ನು ಹಬ್ಬಿಸಿರಲಿಕ್ಕೂ ಸಾಕು ಎಂಬುದು ಕಾಂಗ್ರೆಸ್ ಕಾರ್ಯಕರ್ತರ ವಾದ.**

# ಹೋದೆಯಾ ಅಂದ್ರೆ ಬಂದೆ ಗವಾಕ್ಷೀಲಿ ಅಂದಂಗೆ

**ವೀರೇಶ ಬಳ್ಳಾರಿ** ಗಂಗಾವತಿ

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿಯವರಿಗೆ ಕಾಂಗ್ರೆಸ್ ಹೈಕಮಾಂಡ ಹಸಿರು ನಿಶಾನೆ ತೋರಿಸಿರುವುದು ತಿಳಿದಿರುವ ಸಂಗತಿ. ಇಂಥ ಸಮಯದಲ್ಲೇ ಈವರೆಗೆ ರಾಜಕೀಯವಾಗಿ ತೆರೆಮರೆಯಲ್ಲಿದ್ದ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ದಿಢೀರನೇ ತಾವೂ ಟಿಕೆಟ್ ಆಕಾಂಕ್ಷಿ ಎಂದು ಮುಂದೆ ಬಂದಿರುವುದು ಅನ್ಸಾರಿಗೆ ನುಂಗಲಾರದ ತುತ್ತಾಗಿದೆ.

ತಾಂತ್ರಿಕ ಕಾರಣಗಳಿಂದ ಶಾಸಕ ಅನ್ಸಾರಿ ಜೆಡಿಎಸ್ ಪಕ್ಷಕ್ಕೆ ರಾಜೀನಾಮೆ ನೀಡಿಲ್ಲ, ಆದರೆ, ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತಮ್ಮ ವಿರೋಧಿಗಳನ್ನು ಮಣಿಸಲು ಕಾಂಗ್ರೆಸ್ ಅಭ್ಯರ್ಥಿ ಎಂದು ಬಿಂಬಿಸಿಕೊಂಡು ಈಗಾಗಲೇ ಹಲವು ಸುತ್ತಿನ ಪ್ರಚಾರ ಕಾರ್ಯ ಮುಗಿಸಿದ್ದಾರೆ. ಅನ್ಸಾರಿಗೆ ಬಂಡೆಗಲ್ಲಾಗಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಎಚ್. ಆರ್. ಶ್ರೀನಾಥ ಪಕ್ಷ ತೊರೆದು ಜೆಡಿಎಸ್ ಸೇರ್ಪಡೆಗೊಂಡಿದ್ದು ಶಾಸಕರಿಗೆ ನಿಟ್ಟುಸಿರು ಬಿಡುವಂತೆ ಮಾಡಿದೆ.

ಧೂಮಕೇತುವಿನ ಆಗಮನ: ಮಾಜಿ ಸಂಸದ ಎಚ್.ಜಿ. ರಾಮುಲು ಪರಿವಾರ ಕಾಂಗ್ರೆಸ್ ಹೈಕಮಾಂಡ ನೀತಿ ವಿರೋಧಿಸಿ ಪಕ್ಷ ತೊರೆದು ಜೆಡಿಎಸ್ ಸೇರ್ಪಡೆಗೊಂಡ ನಂತರ, ಅನ್ಸಾರಿಗೆ ಧೂಮಕೇತುವಿನಂತೆ ಮಾಜಿ ಕಂದಾಯ ಸಚಿವ, ಹಿರಿಯ ಕಾಂಗ್ರೆಸಿಗ ಎಂ. ಮಲ್ಲಿಕಾರ್ಜುನ ನಾಗಪ್ಪ ಅಪ್ಪಳಿಸಿದ್ದಾರೆ. ಈ



ಮಾಜಿ ಸಚಿವ ಎಂ. ಮಲ್ಲಿಕಾರ್ಜುನ ನಾಗಪ್ಪ



ಅನ್ಸಾರಿ ಬಲಗೈ ಬಂಟ ಐಲಿ ಬಸವರಾಜ

ಯೋಜನೆಯನ್ನು ಶಾಸಕರ ಬಲಗೈ ಬಂಟ, ನಗರಸಭೆ ಸದಸ್ಯ ಐಲಿ ರಾಧಾ ಅವರ ಪತಿ ಐಲಿ ಬಸವರಾಜ ರೂಪಿಸಿದ್ದಾರೆ ಎಂಬ ಮಾತು ಬಹಿರಂಗಗೊಂಡಿದೆ.

ಇದರ ಪರಿಣಾಮ ಶಾಸಕರಿಗೆ ಇನ್ನೊಂದು ಕಂಟಕ ಬಂದಿದ್ದು ತಲೆ ನೋವಾಗಿ ಪರಿಣಮಿಸಿದೆ. ಗಂಗಾವತಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತಾವು ತಮ್ಮ ಪಕ್ಷದ ಹೈಕಮಾಂಡ ಬಾಗಿಲು ತಟ್ಟಿದ್ದೇನೆ, ತಾವು ಸಹ ಸ್ಪರ್ಧಾಕಾಂಕ್ಷಿ ಎಂದು ಮಲ್ಲಿಕಾರ್ಜುನ ವಿಶ್ವವಾಣಿಗೆ ತಿಳಿಸಿದ್ದಾರೆ.

ಕನಕಗಿರಿ ಕ್ಷೇತ್ರ: ತಾಲೂಕಿನ ಇನ್ನೊಂದು ವಿಧಾನಸಭಾ ಕ್ಷೇತ್ರವಾಗಿರುವ ಕನಕಗಿರಿ ಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾಗುವದಕ್ಕಿಂತ ಮುಂಚೆ 1978 ರಲ್ಲಿ ಮಲ್ಲಿಕಾರ್ಜುನರ ತಂದೆ ಮಾಂತಗೊಂಡ ನಾಗಪ್ಪ ಕಾಂಗ್ರೆಸ್ ಶಾಸಕರಾಗಿ ಆಯ್ಕೆಗೊಂಡಿದ್ದರು. ಇವರ ಅವಧಿಯಲ್ಲಿ ಗಂಗಾವತಿ ಪುರಸಭೆ ರಾಜ್ಯದಲ್ಲಿ ಅತಿ ಹೆಚ್ಚಿನ ಕಂದಾಯ ವಸೂಲಿ ಮಾಡಿ ದಾಖಲೆ ನಿರ್ಮಿಸಿತ್ತು. ಇದರಲ್ಲಿ ಮಾಂತಗೊಂಡ ನಾಗಪ್ಪನವರ ಶ್ರಮ ಸಾಕಷ್ಟಿರುವದನ್ನು ಜನರು ಮರೆತಿಲ್ಲ.

1989 ಮತ್ತು 1999 ರಲ್ಲಿ ಎರಡು ಅವಧಿಗೆ ಎಂ. ಮಲ್ಲಿಕಾರ್ಜುನ ಕನಕಗಿರಿ ಶಾಸಕರಾಗಿದ್ದರು. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 1999 ರಿಂದ 2004 ರವರೆಗೆ ಕಂದಾಯ ಸಚಿವರಾಗಿ ಸಮರ್ಥವಾಗಿ ಕಾರ್ಯ ನಿಭಾಯಿಸಿದರು.

ಹಾದಿ ಸುಲಭ: ಎಚ್.ಜಿ. ರಾಮುಲು ಗರಡಿಯಲ್ಲಿ ಪಳಗಿರುವ ಮಲ್ಲಿಕಾರ್ಜುನ ರಾಮುಲುರವರ ರಾಜಕೀಯ ಹೊಡತಕ್ಕೆ ರಾಜಕೀಯ ಚಟುವಟಿಕೆಗಳಿಂದ ದೂರ ಉಳಿದಿದ್ದರು. ಲೋಕಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ನಿಕಟವರ್ತಿ. ವಿಧಾನ ಪರಿಷತ್ ಸದಸ್ಯ, ನೇಕಾರರ ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಸಿ.ಕೊಂಡಯ್ಯನವರ ಕುಲಬಾಂಧವರಾಗಿದ್ದಾರೆ.

ರಾಮುಲು ಪಟಾಲಂ ಜೆಡಿಎಸ್ ಸೇರ್ಪಡೆ ಹಿನ್ನಲೆಯಲ್ಲಿ ಮಲ್ಲಿಕಾರ್ಜುನರಿಗೆ ಕಾಂಗ್ರೆಸ್ ಪಕ್ಷದಲ್ಲಿ ಹಾದಿ ಸುಗಮವಾಗಿದೆ. ಸರಕಾರದ ಸಾಧನಾ ಸಮಾವೇಶದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನ್ಸಾರಿ ಅಭ್ಯರ್ಥಿ ಎಂದು ಘೋಷಣೆ ಮಾಡಿರುವದು ಅಂತಿಮವಲ್ಲ ಎಂದು ಮಾಜಿ ಸಚಿವರ ಸ್ಪಷ್ಟನೆಯಾಗಿದೆ. ಇಕ್ಬಾಲ್ ಅನ್ಸಾರಿ ಜೆಡಿಎಸ್ ಶಾಸಕರಾಗಿದ್ದಾರೆ. ಅವರ ಬಗ್ಗೆ ತಾವು ಪ್ರತಿಕ್ರಿಯೆ ವ್ಯಕ್ತಪಡಿಸುವದಿಲ್ಲ. ಹೈಕಮಾಂಡ ಟಿಕೆಟ್ ನೀಡುವ ಭರವಸೆ ನೀಡಿದೆ. ಚುನಾಯಿತನಾಗುತ್ತೇನೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ಆನೆ ಬಂತೊಂದು ಆನೆ

**ಎ.ಕೆ. ಉದಯಶಂಕರ** ಬೆಳಗಾವಿ

ಜಿಲ್ಲೆಯಲ್ಲಿ ಬಹುಜನ ಸಮಾಜ ಪಕ್ಷ(ಬಿಎಸ್‌ಪಿ)ದ ಬೇರು ಬಹುಹಿಂದಿನಿಂದಲೂ ಗಟ್ಟಿಯಾಗಿದೆ. ಈ ಸಲದ ಚುನಾವಣೆಯಲ್ಲಿ ಚಿಕ್ಕೋಡಿ-ಸದಲಗಾ, ನಿಪ್ಪಾಣಿ, ರಾಯಬಾಗ(ಮೀಸಲು)ಮತಕ್ಷೇತ್ರಗಳಲ್ಲಿ ಜೆಡಿಎಸ್ ಜತೆ ಚುನಾವಣಾ ಮೈತ್ರಿ ಮಾಡಿ ಕೊಂಡು ತನ್ನ ವರ್ಚಸ್ಸು ತೋರಿ ಸಲು ಪ್ರಯತ್ನಿಸುತ್ತಿದೆ.

ಬಿಎಸ್‌ಪಿ ದಲಿತ ಮತ ದಾರರನ್ನೇ ಪ್ರಮುಖ ವಾಗಿ ನೆಚ್ಚಿಕೊಂಡಿದೆ. ಈಗ ಜಿಲ್ಲೆಯಲ್ಲಿ ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಂಡು ತನ್ನ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸು ತ್ತಿರುವ ಮತಕ್ಷೇತ್ರಗಳಲ್ಲಿ ದಲಿತರ ಸಂಖ್ಯೆ ಹೆಚ್ಚಾಗಿದೆ. ರಾಯಬಾಗ, ಚಿಕ್ಕೋಡಿಯಲ್ಲಿ ತಲಾ 30,000, ನಿಪ್ಪಾಣಿಯಲ್ಲಿ 20,000 ದಲಿತ ಮತದಾರರಿದ್ದಾರೆ. ಇದು ಬಿಎಸ್‌ಪಿ ಪಾಲಿಗೆ ತನಗೆ ದಕ್ಕುತ್ತದೆ ಎಂದು ನಂಬಿದೆ.

ಮಹಾತ್ಮ ಫುಲೆ, ಶಾಹು ಮಹಾರಾಜ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತವೇ ಬಿಎಸ್‌ಪಿಗೆ ಜೀವಾಳ. ಅದೇ ತತ್ವದಡಿ ಉತ್ತರ ಪ್ರದೇಶದಲ್ಲಿ ಆಡಳಿತ ನಡೆಸಿ ಅಧಿಕಾರದ ಚುಕ್ಕಾಣಿ ಹಿಡಿದದ್ದು ಗತ ಇತಿಹಾಸ.

ನೆರೆಯ ಆಂಧ್ರಪ್ರದೇಶದಲ್ಲಿ ಮೂರ್‍ನಾಲ್ಕು ಶಾಸಕರು ಆಯ್ಕೆಯಾಗುತ್ತಿದ್ದರು. ಇದರ ಪ್ರಭಾವದಿಂದ ಕರ್ನಾಟಕದ ಬೀದರ್‌ದಲ್ಲಿ 1994 ರ ವಿಧಾನಸಭಾ ಚುನಾವಣೆಯಲ್ಲಿಯೇ ಜುಲ್ಫಿಕರ್ ಹಶ್ಮಿ ಗೆದ್ದು ಬಿಎಸ್ಪಿ ಖಾತೆ ತೆರೆಯಲು ಕಾರಣರಾಗಿದ್ದರು. ಇದರಿಂದ ಉತ್ತೇಜನಗೊಂಡ ಬಿಎಸ್‌ಪಿ ಸಂಸ್ಥಾಪಕ ಕಾನ್ಶಿರಾಮ್ 1998 ರಲ್ಲಿ ಕರ್ನಾಟಕದಲ್ಲಿ ತಮ್ಮ ಪಕ್ಷವನ್ನು ಬೆಳೆಸಲು ಸಂಕಲ್ಪಿಸಿದ್ದರು. ಇದಕ್ಕಾಗಿ ಅಧಿಕಾರದ ಕಡೆಗೆ ಬಹುಜನರ ನಡಿಗೆ ಎಂಬ ಪಾದಯಾತ್ರೆಯನ್ನು ಎಲ್ಲಾ ಜಿಲ್ಲೆಗಳಲ್ಲೂ ಹಮ್ಮಿಕೊಂಡಿದ್ದರು. 1998 ಆಗಸ್ಟ್ 15 ರಂದು ಇದು ಪ್ರಾರಂಭವಾಯಿತು. ಮಹಾತ್ಮ ಗಾಂಧಿ-ಅಂಬೇಡ್ಕರ್ ನಡುವೆ 1932 ರ ಸೆಪ್ಟಂಬರ್ 24ರಂದು ನಡೆದ ಪುಣೆ ಒಪ್ಪಂದದ ಸವಿನೆನಪಿಗೆ 1998 ರ ಸೆಪ್ಟಂಬರ್ 24 ರಂದು ಬೆಂಗಳೂರಿನ ನ್ಯಾಶನಲ್ ಕಾಲೇಜು ಮೈದಾನದಲ್ಲಿ ಬಿಎಸ್ಪಿಯ ಪಾದ ಯಾತ್ರೆಯ ಮುಕ್ತಾಯ ನಡೆಯಿತು. ನಂತರ 1999 ರ ಫೆ. 29ರಂದು ಬೆಳಗಾವಿಯಲ್ಲಿ ನಡೆದ ಸಮಾವೇಶಕ್ಕೂ ಕಾನ್ಶಿರಾಮ್ ಆಗಮಿಸಿ ಭಾಷಣ ಮಾಡಿದ್ದರು. ಕರ್ನಾಟಕದ ಪ್ರತಿಹಳ್ಳಿಹಳ್ಳಿಗೂ ಬಿಎಸ್ಪಿಯ ಆನೆಯನ್ನು ನುಗ್ಗಿಸಲು ಪ್ರಯತ್ನಿಸಿದ್ದರು.

ಕಾನ್ಶಿರಾಮ್ ನಿಧನದ ನಂತರ ಪಕ್ಷದ ಅಧಿನಾ ಯಕಿ ಕುಮಾರಿ ಮಾಯಾ ವತಿ 2008 ರಲ್ಲಿ ನಡೆದ ವಿಧಾನಸಭಾ ಚುನಾವಣೆ ವೇಳೆ ಬೆಳಗಾವಿಗೆ ಆಗಮಿಸಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದರು. 1999ರಲ್ಲಿ ಚಿಕ್ಕೋಡಿ ವಿಧಾನ ಸಭಾ ಕ್ಷೇತ್ರದಲ್ಲಿ ಬಿಎಸ್ಪಿ ಅಭ್ಯರ್ಥಿಯಾಗಿದ್ದ ರಾಜೀವ ಕಾಂಬಳೆ 3,488 ಮತ, ಸದಲಗಾದಲ್ಲಿ ಎಂ.ಎಲ್. ಬೋಸಲೆ 1,163 ಮತ, 2004 ರ ಚುನಾವಣೆಯಲ್ಲಿ ಸುಧೀರ ಮಾಳಿ 4,240 ಮತ, 1999 ರಲ್ಲಿ ನಿಪ್ಪಾಣಿ ಯಲ್ಲಿ ಐ.ಎನ್. ಬೇಗ್ 604 ಮತ, 2004 ರಲ್ಲಿ ಸಂಕೇಶ್ವರದಲ್ಲಿ ಜೀವನಲತಾ ನಡುವಿ ನಮನಿ 3,292 ಮತ ಪಡೆದುಕೊಂಡಿದ್ದರು. ಇವರೆಲ್ಲ ತೃತೀಯ ಸ್ಥಾನ ಗಳಿಸಿ ಪೈಪೋಟಿ ನೀಡಿದ್ದು ಗಮನಾರ್ಹ. ಕಳೆದ ಚುನಾವಣೆಯಲ್ಲಿ ಕೊಳ್ಳೆಗಾಲದಲ್ಲಿ ಪಕ್ಷದ ಅಧ್ಯಕ್ಷ ಎನ್.ಮಹೇಶ ಒಂದೂವರೆ ಸಾವಿರ ಮತಗಳಿಂದ ಸೋತಿದ್ದರು. ಈ ಸಲ ಅವರು ತೀವ್ರ ಪೈಪೋಟಿ ಕೊಡುವ ಸಾಧ್ಯತೆ ಇದ್ದು ಬಿಎಸ್ಪಿಗೆ ರಾಜ್ಯದಲ್ಲಿ ಮತ್ತೆ ಖಾತೆ ತೆರೆದು ಕೊಡಲಿದ್ದಾರೆಯೇ ಎನ್ನುವುದನ್ನು ಚುನಾವಣೆಯ ಫಲಿತಾಂಶ ಸಾಬೀತುಪಡಿ ಸಲಿದೆ. ಒಟ್ಟಾರೆ, ಈ ಸಲ ರಾಜ್ಯದಲ್ಲಿ ಜೆಡಿಎಸ್ ಜತೆ ಬಿಎಸ್ಪಿ ಮೈತ್ರಿಗೆ ಮುಂದಾಗಿದೆ. ದಲಿತ ಮತಗಳನ್ನು ತನ್ನ ಬುಟ್ಟಿಗೆ ಹಾಕಿ ಕೊಳ್ಳುವ ನಿಟ್ಟಿನಲ್ಲಿ ಬಿಎಸ್ಪಿ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತದೆ ಎನ್ನುವುದು ಕಾದು ನೋಡಬೇಕು.

# ರಾಷ್ಟ್ರೀಯ ಪಕ್ಷಗಳಿಂದ ರಾಜ್ಯಕ್ಕೆ ಅನ್ಯಾಯ

**ವಿಶ್ವವಾಣಿ ಸುದ್ದಿಮನೆ** ಬೇಲೂರು

ರಾಷ್ಟ್ರೀಯ ಪಕ್ಷಗಳಿಂದ ರಾಜ್ಯಕ್ಕೆ ತೀವ್ರ ಅನ್ಯಾಯವಾಗಿದ್ದು, ಮತದಾರರು ಪ್ರಾದೇಶಿಕ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ಕೋಟೆ ಚನ್ನಕೇಶವ ಬಯಲು ರಂಗಮಂದಿರದಲ್ಲಿ ಹಾಸನ ಜಿಲ್ಲಾ ಜೆಡಿಎಸ್ ಚುನಾವಣೆ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಪಕ್ಷಗಳು ಭ್ರಷ್ಟಾಚಾರದಲ್ಲಿ ಒಂದೇ ನಾಣ್ಯದ ಮುಖಗಳಿದ್ದಂತೆ. ಅವು ಸುಳ್ಳು ಹೇಳುತ್ತ ಜನರನ್ನು ದಾರಿ ತಪ್ಪಿಸುವ ಕೆಲಸದಲ್ಲಿ ಮುಂದಾಗಿವೆ. ಅನ್ನಭಾಗ್ಯ ದೇವೇಗೌಡರ ಕೊಡುಗೆ ಹೊರತು ಕಾಂಗ್ರೆಸ್‌ನದಲ್ಲ ಎಂದರು.

**ಮೂಗಿಗೆ ತುಪ್ಪ:** ಸಾವಿರಾರು ಕೋಟಿ ರು. ವೆಚ್ಚದ ಎತ್ತಿನಹೊಳೆ ಯೋಜನೆಯಲ್ಲಿ ಬೇಲೂರು ಜನತೆಗೆ ಕಾಂಗ್ರೆಸ್ ಮೂಗಿಗೆ ತುಪ್ಪ ಸವರಿದೆ. ಎತ್ತಿಹೊಳೆಯಿಂದ ಕೇವಲ ಕುಡಿಯುವ ನೀರಿಗೆ ಮಾತ್ರ ಅನುಮೋದನೆ ನೀಡಿದೆ. ಇದನ್ನೇ ಕೆಲ ಕಾಂಗ್ರೆಸ್ ನಾಯಕರು ಮಹತ್ವದ ಯೋಜನೆ ಎನ್ನುತ್ತಾರೆ ಎಂದರು.

**30 ಕೋಟಿ ರು. ಬಾಕಿ ನೀಡಬೇಕು:** ರಾಜ್ಯದಲ್ಲಿ ಸತತ ನಾಲ್ಕು ವರ್ಷದಿಂದ ಮಳೆ ಇಲ್ಲದೆ 128 ತಾಲೂಕು ಬರಗಾಲದಿಂದ ಬಸವಳಿದಿದೆ. ಹಾಸನ ಜಿಲ್ಲೆಯ 7 ತಾಲೂಕು ತೀವ್ರ ಬರಗಾಲದಿಂದ ತತ್ತರಿಸಿದ್ದು, ಜನ-ಜಾನುವಾರುಗಳು ಕುಡಿಯುವ ನೀರಿಗೆ ಪರದಾಡುತ್ತಿದ್ದಾರೆ. ಸರಕಾರ ಹಾಸನ ಜಿಲ್ಲೆಗೆ ಕುಡಿಯುವ ನೀರಿಗೆ 30 ಕೋಟಿ ರು. ಹಣ ಬಾಕಿ ನೀಡಬೇಕು. ಈ ವಿಷಯವನ್ನು ತಿಳಿದಿದ್ದರೂ ಸಹ ಜಿಲ್ಲಾ ಸಚಿವರು ಮೌನಕ್ಕೆ ಜಾರಿದ್ದಾರೆ. ಮಹಾಮಸ್ತಕಾಭಿಷೇಕಕ್ಕೆ ಕೇಂದ್ರದಿಂದ ಹಣ ನೀಡಿಲ್ಲ. ರಾಜ್ಯಕ್ಕೆ ನೆಪ ಮಾತ್ರಕ್ಕೆ ಹಣ ನೀಡಿದೆ. ಇದೇ ಹಣಕ್ಕಾಗಿ ಜಿಲ್ಲಾಧಿಕಾರಿಗಳು ಹಾಗೂ ಉಸ್ತುವಾರಿ ಸಚಿವರ ಮಧ್ಯೆ ವೈಮನಸ್ಸು ಉಂಟಾಗಿದೆ ಎಂದು ತಿಳಿಸಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಂ.ಎ. ನಾಗರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಡಿ.ಚಂದ್ರೇಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಕೆ.ಎಸ್.ಲಿಂಗೇಶ್, ಅನಂತ ಸುಬ್ಬರಾಯ, ಭಾರತೀ, ಹರೀಶ್ ಮತ್ತಿತರರು ಇದ್ದರು.



ಬೇಲೂರಿನಲ್ಲಿ ನಡೆದ ಜೆಡಿಎಸ್ ಚುನಾವಣೆ ಪ್ರಚಾರ ಸಭೆಯನ್ನು ಶಾಸಕ ಎಚ್.ಡಿ. ರೇವಣ್ಣ ಉದ್ಘಾಟಿಸಿದರು. ವಿವಿಧ ಗಣ್ಯರು ಉಪಸ್ಥಿತರಿದ್ದರು.

# ಸಿದ್ದುರಿಂದ ಕಲಿವ ಅಗತ್ಯ ಪಿಎಂಗಿಲ್ಲ



**ಕೊಪ್ಪಳ:** ರಾಜ್ಯದಲ್ಲಿ ಅಕ್ಷರಶಃ ಗುಂಡಾರಾಜ್ಯದಂತಹ ವ್ಯವಸ್ಥೆ ಹುಟ್ಟು ಹಾಕಿರುವ ಸಿದ್ದರಾಮಯ್ಯನ ಸರ್ಕಾರ ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿದೆ. ದಕ್ಷ ಅಧಿಕಾರಿಗಳ ಕೊಲೆಗಳು, ವರ್ಗಾವಣೆ, ಕೆಲ ಸಮುದಾಯಗಳ ಓಲೈಕೆ ರಾಜಕಾರಣ, ಹಿಂದು ಯುವಕರ, ಮುಖಂಡರ ಹತ್ಯೆಗಳು, ಬಾಯಿಗೆ ಬಂದಂತೆ ಹರಟುವ ಸಚಿವ ಸಂಪುಟ ಹೀಗೆ ರಾಜ್ಯದ ಜನತೆಗೆ ಉಸಿರು ಗಟ್ಟಿಸುವ ವಾತವರಣ ಸೃಷ್ಠಿಸಿರುವ ಸಿದ್ದರಾಮಯ್ಯನನ್ನು ನೋಡಿ, ಅವರ ಆಡಳಿತವನ್ನು ನೋಡಿ ಕಲಿಯುವ ಅವಶ್ಯಕತೆ ಈ ದೇಶದ ಪ್ರಧಾನ ಮಂತ್ರಿಗಳಿಗೆ ಇಲ್ಲ ಎಂದು ರಾಷ್ಟ್ರೀಯ ಪರಿಷತ್ ಸದಸ್ಯ ಸಿ. ವಿ. ಚಂದ್ರಶೇಖರ ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿ ಮಾತಿಗೆ ಬಿಜೆಪಿ ಕಿಡಿ ಕಾರಿದ್ದಾರೆ.

ಮರಾಠಿ ಭಾಷಿಕರ ಪ್ರಾಬಲ್ಯ | ಬಿಜೆಪಿ, ಕಾಂಗ್ರೆಸ್, ಪಕ್ಷೇತರ ಪೈಪೋಟಿ | ಎಂಇಎಸ್‌ನಲ್ಲಿ ಭುಗಿಲೆದ್ದ ಬಂಡಾಯ

# ನಾರಿ ನಾಗಾಲೋಟ ತಡೆಯಲು ಭಾರಿ ಕಸರತ್ತು

**ಎ.ಕೆ. ಉದಯಶಂಕರ** ಬೆಳಗಾವಿ

ಈ ಸಲ ಚುನಾವಣೆಗೂ ಸಾಕಷ್ಟು ಮೊದಲೇ ಬೆಳಗಾವಿ ಗ್ರಾಮೀಣ ತೀವ್ರ ಹಣಾಹಣಿಯಿಂದ ಕೂಡಿದ ಕ್ಷೇತ್ರವಾಗಿ ಮಾರ್ಪಟ್ಟಿದೆ. ಚುನಾವಣೆಗೆ ನಾಲ್ಕಾರು ತಿಂಗಳು ಬಾಕಿ ಇರುವಂತೆಯೇ ಕಾಂಗ್ರೆಸ್-ಬಿಜೆಪಿ ನಡುವೆ ಇಲ್ಲಿ ಹಾವು-ಮುಂಗುಸಿಯಂತೆ ಕಚ್ಚಾಟಕ್ಕಿಳಿದಿವೆ.

ಬಿಜೆಪಿಗೆ ಕ್ಷೇತ್ರ ಉಳಿಸಿಕೊಂಡರೆ ಸಾಹಸವಾಗಲಿದೆ. ಕಾಂಗ್ರೆಸ್, ಎಂಇಎಸ್‌ನಲ್ಲಿ ಬಂಡಾಯ ಅಭ್ಯರ್ಥಿಗಳ ಕಾಟ ಅಧಿಕೃತ ಅಭ್ಯರ್ಥಿಗಳ ಗೆಲವಿಗೆ ತೊಡಕಾಗಿದೆ. ಬಿಜೆಪಿಯಿಂದ ಶಾಸಕ ಸಂಜಯ ಪಾಟೀಲ, ಕಾಂಗ್ರೆಸ್‌ನಿಂದ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಹೆಬ್ಬಾಳ್ಕರ್ ಸ್ಪರ್ಧಿಸುವುದು ಬಹುತೇಕ ಅಂತಿಮವಾಗಿದೆ. ಸಿಎಂ ಆಗಿದ್ದ ಸದಾನಂದ ಗೌಡರ ವಿರುದ್ಧ ವಿಧಾನ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಆನಂದಸ್ವಾಮಿ ಗಡ್ಡದೇವರಮಠ ಕಾಂಗ್ರೆಸಿನಿಂದ ಬಂಡಾಯ ಅಭ್ಯರ್ಥಿಯಾಗಿ ಕಳೆದ ಸಲ ಸ್ಪರ್ಧಿಸಿದ್ದರಿಂದ ಲಕ್ಷ್ಮೀ ಹೆಬ್ಬಾಳ್ಕರ್ ಗೆಲವಿಗೆ ಅಡ್ಡಿಯಾಗಿತ್ತು. ಈ ಸಲ ಸತೀಶ ಜಾರಕಿಹೊಳಿ ಅವರು ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಕೆಡಹುವ ನಿಟ್ಟಿನಲ್ಲಿ ಬಂಡಾಯ ಅಭ್ಯರ್ಥಿಗಳನ್ನು ತಯಾರು ಮಾಡಿ ಕಣಕ್ಕೆ ಇಳಿಸಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಏನೇ ಆದರೂ ಲಕ್ಷ್ಮೀ ಹೆಬ್ಬಾಳ್ಕರ್ ಗೆದ್ದು ಬಾರದಂತೆ ಕೆಲ ಕಾಣದ ಕೈಗಳು ತೆರೆಮರೆಯಲ್ಲಿ ಸೂತ್ರ ರೂಪಿಸುತ್ತಿವೆ. ಸದ್ಯಕ್ಕೆ ಲಕ್ಷ್ಮೀ ಇಡೀ ಕ್ಷೇತ್ರ ಸುತ್ತಾಡಿ ಮಿಂಚಿನ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ರಾಜ್ಯ ಸರಕಾರದ ವಿವಿಧ ಕಾಮಗಾರಿಗಳಿಗೆ ಬಿಜೆಪಿ ಶಾಸಕ ಸಂಜಯ ಪಾಟೀಲ ಅವರನ್ನು ದೂರವಿಟ್ಟು ತಮ್ಮ ಸರಕಾರದ ಯೋಜನೆಗಳ ಲಾಭದ ಶ್ರೇಯಸ್ಸು ನೇರವಾಗಿ ತಮಗೆ ಸಿಗಬೇಕು ಎಂದು ಆಡಳಿತವನ್ನು ಸರಿಯಾಗಿಯೇ ಬಳಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಎಂಇಎಸ್‌ನಿಂದ ಮಾಜಿ ಶಾಸಕ ಮನೋಹರ ಕಿಣೇಕರ ಸದ್ಯಕ್ಕೆ ಒಬ್ಬರೇ ಕಾಣಿಸಿಕೊಂಡಿದ್ದಾರೆ. ಮಾಜಿ ಮೇಯರ್ ಶಿವಾಜಿ ಸುಂಠಕರ ಕಮಲ ಪಡೆಗೆ ಜಿಗಿದಿದ್ದರಿಂದ ಕಿಣೇಕರ ಅವರೇ ಈಗ ಎಂಇಎಸ್‌ನ ಅಧಿಕೃತ ವಾರಸುದಾರರು. ಇದುವರೆಗೆ ಕಟ್ಟಾ ಕಾಂಗ್ರೆಸಿಗರಾಗಿ ಉಳಿದುಕೊಂಡಿದ್ದ ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಮಹಾನಗರಪಾಲಿಕೆ ಮಾಜಿ ಸದಸ್ಯ ಶಿವನಗೌಡ ಪಾಟೀಲ ದಿಢೀರನೇ ಜೆಡಿಎಸ್ ಸೇರ್ಪಡೆಗೊಂಡಿದ್ದಾರೆ. ಟಿಕೆಟ್ ಸಿಗುವ ಭರವಸೆ ಮೇರೆಗೆ ಅವರು ಜೆಡಿಎಸ್ ಸೇರ್ಪಡೆಗೊಂಡಿದ್ದಾರೆ. ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿರೋಧಿ ಗುಂಪಿನಲ್ಲಿ ಕಾಣಿಸಿಕೊಂಡಿದ್ದ ಶಿವನಗೌಡ ಪಾಟೀಲ ಅವರು ಹೆಬ್ಬಾಳ್ಕರ್ ಅವರಿಗೆ ದೊರೆಯಬಹುದಾಗಿದ್ದ ಬೆಳಗಾವಿ ಪೂರ್ವಭಾಗದ ಮತಗಳಿಗೆ ಲಗ್ಗೆ ಹಾಕುವ ಸಾಧ್ಯತೆ ಇದೆ. ಕೆಲ ಜಿಪಂ ಸದಸ್ಯರು ಶಿವನಗೌಡ ಪಾಟೀಲ ಜತೆ ಗುರುತಿಸಿಕೊಂಡಿದ್ದು, ಈ ಸಲ ಗೆದ್ದೇ ಗೆಲ್ಲುತ್ತೇನೆ ಎಂಬ ಅತೀವ ಆತ್ಮವಿಶ್ವಾಸ ಹೊಂದಿರುವ ಹೆಬ್ಬಾಳ್ಕರ್‌ಗೆ ಇದು ಕಹಿ ಬೆಳವಣಿಗೆಯಾಗಲಿದೆ. ಲಕ್ಷ್ಮೀ ಹೆಬ್ಬಾಳ್ಕರ್ ಗೆದ್ದರೆ ಅವರನ್ನು ಎದುರಿಸಲು ಸಾಧ್ಯವಾಗದು, ಒಮ್ಮೆ ಗೆದ್ದರೆ ತಮ್ಮ ಪ್ರಭುತ್ವ ಕಡಿಮೆಯಾಗಬಹುದು ಎಂಬ ಭಯದಿಂದ ಅವರಿಗೆ ಈ ಸಲದ ಚುನಾವಣೆಯಲ್ಲೂ ಸೋಲುಣಿಸಬೇಕು ಎಂದು ತೆರೆಮರೆಯಲ್ಲಿ ಕಸರತ್ತು ನಡೆಯುತ್ತಿದೆ. ಚುನಾವಣೆ ವೇಳೆಗೆ ಹೆಬ್ಬಾಳ್ಕರ್‌ಗೆ ಸೋಲುಣಿಸಲು ಬಂಡಾಯ ಅಭ್ಯರ್ಥಿಯನ್ನು ಈ ಸಲವೂ ಹುಟ್ಟುಹಾಕುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.



ಸಂಜಯ ಪಾಟೀಲ



ಲಕ್ಷ್ಮೀ ಹೆಬ್ಬಾಳ್ಕರ್



ಮನೋಹರ ಕಿಣೇಕರ್



ಶಿವನಗೌಡ ಪಾಟೀಲ

**2004 ಚುನಾವಣೆ**

| | |
|---|---|
| ಅಭಯ ಪಾಟೀಲ ಬಿಜೆಪಿ | 32,854 (ವಿಜೇತ) |
| ಎಸ್.ಸಿ. ಮಾಳಗಿ ಕಾಂಗ್ರೆಸ್ | 29,156 |
| ಶಿವಾಜಿ ಸುಂಠಕರ ಎಂಇಎಸ್ | 28,420 |

**2008 ಚುನಾವಣೆ**

| | |
|---|---|
| ಸಂಜಯ ಪಾಟೀಲ ಬಿಜೆಪಿ | 42,208 (ವಿಜೇತ) |
| ಎಸ್.ಸಿ. ಮಾಳಗಿ ಕಾಂಗ್ರೆಸ್ | 33,899 |
| ಮನೋಹರ ಕಿಣೇಕರ್ ಎಂಇಎಸ್ | 28,689 |

**2013 ಚುನಾವಣೆ**

| | |
|---|---|
| ಸಂಜಯ ಪಾಟೀಲ ಬಿಜೆಪಿ | 38,322 (ವಿಜೇತ) |
| ಮನೋಹರ ಕಿಣೇಕರ ಎಂಇಎಸ್ | 36,987 |
| ಲಕ್ಷ್ಮೀ ಹೆಬ್ಬಾಳ್ಕರ್ ಕಾಂಗ್ರೆಸ್ | 35,811 |

**ಮತದಾರರು**

| | |
|---|---|
| ಮಹಿಳೆಯರು | 1,12,275 |
| ಪುರುಷರು | 1,15,547 |
| ಒಟ್ಟು | 2,27,822 |